ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\3957\2014\ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 27.6.2016

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ**

**ವಿಷಯ:** ಸರ್ಕಾರಿ ನೌಕರರಾದ ಶ್ರೀ.ನಾಗಹನುಮಯ್ಯ, ವಿಶೇಷಭೂಸ್ವಾಧೀನಾಧಿಕಾರಿಗಳು, ಹೇಮಾವತಿ ನಾಲಾವಲಯ, ತುಮಕೂರು ರವರು ಕರ್ತವ್ಯ ಲೋಪ/ದುರ್ವರ್ತನೆ ಎಸಗಿರುವ ಬಗ್ಗೆ.

*******

ಶ್ರೀ.ಡಿ.ಹೆಚ್.ಬಸವರಾಜ್, ಬಿನ್ ಹುಚ್ಚೆಗೌಡ, ದೊಡ್ಡಘಟ್ಟ ಕಸಬಾ ಹೋಬಳಿ, ತುರುವೇಕೆರೆ ತುಮಕೂರು ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶ್ರೀ.ನಾಗಹನುಮಯ್ಯ, ವಿಶೇಷಭೂಸ್ವಾಧೀನಾಧಿಕಾರಿಗಳು, ಹೇಮಾವತಿ ನಾಲಾವಲಯ, ತುಮಕೂರು (ಇನ್ನು ಮುಂದೆ "ಎದುರುದಾರ" ಎಂದು ಕ್ರಮವಾಗಿ ಕರೆಯಲ್ಪಡುತ್ತಾರೆ) ರವರ ವಿರುದ್ಧ ಅಧಿಕಾರ ದುರುಪಯೋಗ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ದೂರುದಾರರು ತಮ್ಮ ದೂರಿನಲ್ಲಿ ಹೇಮಾವತಿ ನಾಲೆಗೆ ಭೂ ಸ್ವಾಧೀನವಾಗಿರುವ ತುರುವೇಕೆರೆ ತಾಲ್ಲೂಕು ದೊಡ್ಡಘಟ್ಟ ಗ್ರಾಮದ ಜಮೀನುಗಳಾದ ಎಡಭಾಗದ ರಿ.ಸ.ನಂ: 24, 25 ಹಾಗೂ ಬಲಭಾಗದ ರಿ.ಸ. ನಂ: 26, 27 ಇವುಗಳ ಪರಿಹಾರ ಧನ ವಿತರಿಸುವಲ್ಲಿ ಅವ್ಯವಹಾರವಾಗಿದ್ದು, ಬಲಭಾಗದ ಜಮೀನುಗಳಿಗೆ 35 ಲಕ್ಷ ರೂ. ಪರಿಹಾರ ನೀಡಿದ್ದರೆ ಎಡ ಭಾಗದ ಜಮೀನುಗಳಿಗೆ ಕೇವಲ 28000/- ಪರಿಹಾರ ಧನ ನೀಡಿದ್ದಾರೆ. ಈ ಬಗ್ಗೆ ಎದುರುದಾರರನ್ನು ವಿಚಾರಿಸಿದಾಗ ಬಲ ಭಾಗದ ಜಮೀನುಗಳನ್ನು ಮರವಳಿಗಳು ಇರುವುದರಿಂದ ಹೆಚ್ಚಿನ ಪರಿಹಾರ ಧನ ನೀಡಲಾಗಿದೆ ಅಂತ ಹೇಳುತ್ತಿದ್ದಾರೆ. ಆದರೆ, ಎದುರುದಾರರು ಸುಮಾರು 10 ಲಕ್ಷ ರೂ. ಗಳ ಲಂಚ

Scanned By Scanner Go

ಪಡೆದು ಹೆಚ್ಚಿನ ಪರಿಹಾರ ಧನ ನೀಡಿದ್ದು ಕಂಡುಬರುತ್ತದೆ. ಆದ್ದರಿಂದ ಎದುರುದಾರರ ವಿರುದ್ಧ ಶಿಸ್ತು ಕ್ರಮ ಜರುಗಿಸಿ ಸ್ಥಳ ಪರಿಶೀಲನೆ ನಡೆಸಿ ಹೆಚ್ಚಿನ ಪರಿಹಾರ ಧನ ಕೊಡಿಸಬೇಕೆಂದು ಕೇಳಿಕೊಂಡಿದ್ದಾರೆ.

3. **ಸದರಿ ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ಈ ಕೆಳಕಂಡಂತೆ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.**

ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರು ತಮ್ಮ ಕಛೇರಿಗೆ ಪುನಃ ಈ ಸಂಬಂಧ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ ದಿ: 21.2.2013 ರಂದು ಕಸಬಾ ಹೋಬಳಿ ದೊಡ್ಡಘಟ್ಟ ಗ್ರಾಮದ ರಿ.ಸ. ನಂ: 24/1 ಹಾಗೂ ಇತರೆ ಜಮೀನುಗಳ ನಾಲಾ ಯೋಜನೆಗೆ ಕ್ಷೇತ್ರ 5.27 ಗು., ಜಮೀನನ್ನು ಸ್ವಾಧೀನ ಪಡೆಸಿಕೊಂಡು ಅವಾರ್ಡ್ ಮಾಡಲಾಗಿದೆ. ದೂರುದಾರರು ಅವಾರ್ಡ್ ಮಾಡುವ ವೇಳೆಯಲ್ಲಿ ತನ್ನ ಜಮೀನಿನಲ್ಲಿರುವ ಮರಳಿಗಳನ್ನು ಕೈಬಿಟ್ಟು ಇತರರಿಗೆ ಮರಳಿಗಳನ್ನು ಸೇರಿಸಿ ಅವಾರ್ಡ್ ಮಾಡಲಾಗಿದೆ ಅಂತ ದೂರು ಸಲ್ಲಿಸಿದ್ದಾರೆ. ಆದರೆ, ಭೂ ಸ್ವಾಧೀನ ಕಾಯಿದೆ 1894ರ ಪ್ರಕಾರ ಒಂದು ಬಾರಿ ಅವಾರ್ಡ್ ಆದ ನಂತರ ಪುನಃ ಅವಾರ್ಡ್ ಮಾಡಲು ಭೂ ಸ್ವಾಧೀನಾಧಿಕಾರಿಗಳಿಗೆ ಅವಕಾಶ ಇರುವುದಿಲ್ಲ. ಆದ್ದರಿಂದ ಸದರಿ ಪ್ರಕರಣದ ಬಗ್ಗೆ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯ ತುರುವೇಕೆರೆ ರವರಿಗೆ ಕ್ರಮ ವಹಿಸಲು ಸಲ್ಲಿಸಲಾಗಿದೆ ಅಂತ ತಿಳಿಸಿದ್ದಾರೆ.

4. **ಈ ಹಂತದಲ್ಲಿ ಸದರಿ ದೂರಿನ ಬಗ್ಗೆ ತನಿಖೆ ಮಾಡಿ ವರದಿ ಸಲ್ಲಿಸಲು ಮಾನ್ಯ ಜಿಲ್ಲಾಧಿಕಾರಿಗಳು, ತುಮಕೂರು ರವರಿಗೆ ಆದೇಶಿಸಲಾಯಿತು ಅವರು ತಮ್ಮ ವರದಿಯಲ್ಲಿ:-**

ಈಗಾಗಲೇ ದಿ: 30.4.2015, 25.5.2015, ಹಾಗೂ 10.7.2015 ರಂದು ವಿಶೇಷ ಭೂ ಸ್ವಾಧೀನಾಧಿಕಾರಿಗಳು ಹೇಮಾವತಿ ನಾಲಾ ತುಮಕೂರು ಇವರು ಸಲ್ಲಿಸಿರುವ ವರದಿಯನ್ನು ಅನುಮೋದಿಸುತ್ತಾ, ಭೂ ಸ್ವಾಧೀನ ವೇಳೆಯಲ್ಲಿ ಭೂ ಪರಿಹಾರ ವಿತರಿಸುವಾಗ ತಾರತಮ್ಯ ಮಾಡಿದ್ದಾರೆಂದು ದೂರು ಬಂದಾಗ ಕಾನೂನು

Scanned By Scanner Go

ಸಲಹೇಗಾರರು ಹಾಗೂ ತಮ್ಮ ಕಛೇರಿಯ ಸಲಹೆಯಂತೆ ಒಂದು ಬಾರಿ ಅವಾರ್ಡ್ ಮಾಡಿದರೆ ಪುನಃ ಅವಾರ್ಡ್ ಮಾಡಲು ಭೂ ಸ್ವಾಧೀನ ಕಾಯಿದೆ 1894ರಡಿಯಲ್ಲಿ ಅವಕಾಶವಿರುವುದಿಲ್ಲ. ಅಲ್ಲದೆ ದೊಡ್ಡಘಟ್ಟ ಗ್ರಾಮದ ರಿ.ಸ. ನಂ: 24/1ರಲ್ಲಿ ಅನೇಕ ಜನ ಖಾತೆದಾರರಿದ್ದು, ಅದರಲ್ಲಿ 14 ಗುಂಟೆ ಜಮೀನು ಮತ್ತು 8 ತೆಂಗಿನ ಮರಗಳಿಗೆ ರೂ. 1,20,239/- ರೂ.ಗಳ ಅವಾರ್ಡ್ ತಯಾರಿಸಲಾಗಿರುತ್ತದೆ. ದೂರುದಾರರ 6.1/2ಗುಂಟೆ ಜಮೀನು ಭೂ ಸ್ವಾಧೀನವಾಗಿದ್ದು, ಅದರ ಪ್ರಕಾರ ಮಾರುಕಟ್ಟೆ ದರ ಸೊಲೇಸಿಯಂ ಮತ್ತು ಬಡ್ಡಿ ಮತ್ತು ಒಟ್ಟು ಸೇರಿ 10,888/- ರೂ. ಗಳ ಅವಾರ್ಡ್ ಮೊತ್ತವನ್ನು ವಿತರಿಸಲಾಗಿರುತ್ತದೆ. ಆದ್ದರಿಂದ ಇದರಲ್ಲಿ ಯಾವುದೇ ತಾರತಮ್ಯವಾಗಿರುವುದಿಲ್ಲವೆಂದು ಹಾಗೂ ಪ್ರಕರಣವನ್ನು ಮುಕ್ತಾಯಗೊಳಿಸಲು ಕೋರಿದ್ದಾರೆ.

5. **ದೂರುದಾರರ ಪ್ರತ್ಯುತ್ತರವನ್ನು ಕೇಳಲಾಗಿ, ಈ ಕೆಳಕಂಡಂತೆ ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿರುತ್ತಾರೆ.**

ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಸರ್ವೆ ನಂ: 34/3 ಜಮೀನಿಗೆ 10,55,123/- ಹಾಗೂ ಸ. ನಂ: 80/1 ಜಮೀನಿಗೆ 270,074/- ರೂ.ಗಳ ಬೋಗಸ್ ನೀಡಿರುತ್ತಾರೆ. ಹೆಚ್ಚು ಪರಿಹಾರ ಧನ ಪಡೆದ ವ್ಯಕ್ತಿಗಳು ಸುಳ್ಳು ದಾಖಲಾತಿಗಳನ್ನು ಸೃಷ್ಠಿಸಿ ಹೆಚ್ಚಿನ ಪರಿಹಾರ ಧನ ಪಡೆದಿರುತ್ತಾರೆ. ಆದ್ದರಿಂದ ಕೊಟ್ಟಿರುವ ಬೋಗಸ್ ಪರಿಹಾರವನ್ನು ತಡೆಹಿಡಿಯಬೇಕೆಂದು ವಿನಂತಿಸಿಕೊಂಡಿದ್ದಾರೆ.

6. **ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:**

"ಜಿಲ್ಲಾಧಿಕಾರಿಗಳ ವರದಿ ಮತ್ತು ಪ್ರತ್ಯುತ್ತರ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿದಾಗ, ಎದುರುದಾರರು ಭೂ ಸ್ವಾಧೀನ ಕಾಯಿದೆ 1894ರ ಪ್ರಕಾರ ಒಂದು ಬಾರಿ ಅವಾರ್ಡ್ ಆದರೆ ಪುನಃ ಆವಾರ್ಡ್ ಮಾಡಲು ಅವಕಾಶ ವಿರುವುದಿಲ್ಲವೆಂದು ತಮ್ಮ ಆಕ್ಷೇಪಣೆಯಲ್ಲಿ ಹಾಗೂ ಜಿಲ್ಲಾಧಿಕಾರಿಗಳ ವರದಿಯಲ್ಲಿ ತಿಳಿಸಿದ್ದಾರೆ. ಆದರೆ, ಎದುರುದಾರರು ಪರಿಹಾರ ವಿತರಣೆಯಲ್ಲಿ ತಾರತಮ್ಯ ಮಾಡಿ ದೂರುದಾರರ

Scanned By Scanner Go

ಜಮೀನಿನ ಅಕ್ಕಪಕ್ಕದಲ್ಲಿರುವ ಜಮೀನುಗಳಾದ ಸ. ನಂ: 25,26,27, ಇವುಗಳಲ್ಲಿ ಯಾವುದೇ ಮರವಳಿಗಳು ಇಲ್ಲದಿದ್ದರೂ ಇವೇ ಎಂದು ತೋರಿಸಿ ಹೆಚ್ಚಿನ ಪರಿಹಾರ ನೀಡಿರುವುದಾಗಿ ಆಪಾದಿಸಿದ್ದಾರೆ. ಮಾನ್ಯ ಜಿಲ್ಲಾಧಿಕಾರಿಗಳು ತಮ್ಮ ವರದಿಯೊಂದಿಗೆ ಮೇಲ್ಕಾಣಿಸಿ ಜಮೀನುಗಳ ಜೆ.ಎಂ.ಸಿ, ಸ್ಥಳ ಮಹಜರ್ ಇತ್ಯದಿ ಯಾವುದೇ ಕ್ರಮಗಳನ್ನು ಕೈಗೊಂಡಿರುವುದಿಲ್ಲ. ಕೇವಲ ಎದುರುದಾರರು ತಯಾರಿಸಿದ ವರದಿ ಆಧಾರದ ಮೇಲೆ ತಮ್ಮ ವರದಿ ನೀಡಿದ್ದಾರೆ. ಎದುರುದಾರರು ತಾವು ಜಂಟಿ ಸ್ಥಳ ಪರಿಶೀಲಿಸಿ, ತಖ್ತೇಯನ್ನು ತಯಾರಿಸಿ ದೃಢೀಕರಿಸಿದ್ದಾಗಿ ಹೇಳುತ್ತಾರೆ. ಆದರೆ ಈ ಬಗ್ಗೆ ಯಾವುದೇ ದಾಖಲೆಗಳು ಹೇಳಿಕೆಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಎದುರುದಾರರು ಆವಾರ್ಡ್ ಮಾಡುವ ವೇಳೆಯಲ್ಲಿ ಲೋಪವೆಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ."

7. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರು ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

8. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

9. ಎದುರುದಾರರು ಸಾರ್ವಜನಿಕ/ ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ ಕರ್ತವ್ಯ ಲೋಪವೆಸಗಿ, ಸಾರ್ವಜನಿಕ/ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ 3(1) (i) ಮತ್ತು (ii) ರನ್ವಯ

Scanned By Scanner Go

ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಭಾದ್ಯರಾಗಿರುವುದು ಕಂಡು ಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಭಂಧ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14-ಎ ರಡಿಯಲ್ಲಿ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ಈ ಪ್ರಾಧಿಕಾರಕ್ಕೆ ವಹಿಸ ಬೇಕೆಂದೂ ಕೋರಿದೆ.

10. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 29.6.16.

(ನ್ಯಾಯಾಮೂರ್ತಿ ಸುಬಾಷ್ ಬಿ ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.

Scanned By Scanner Go